## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2026-27ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ, ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸು (MBBS) ಗಳ ಸೀಟುಗಳ ಪ್ರವೇಶ ಶುಲ್ಕವನ್ನು ನಿಗಧಿಪಡಿಸುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 145 ಆರ್‌ಜಿಯು 2025, ದಿನಾಂಕ:21.07.2025.

2. 2026-27ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಖಾಸಗಿ ಕಾಲೇಜುಗಳ ಸಂಘಗಳೊಂದಿಗೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:12.06.2026ರಂದು ನಡೆದ ಸಭಾ ನಡವಳಿಗಳು.

*******

**ಪ್ರಸ್ತಾವನೆ:**

ಮೇಲೆ ಓದಲಾದ(1)ರ ಆದೇಶದಲ್ಲಿ ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ (KPCF/KRLMPCA/AMPCK) ಸಹಿ ಮಾಡಿರುವ ಪರಸ್ಪರ ಒಡಂಬಡಿಕೆಯಂತೆ ಸರ್ಕಾರಿ/ಖಾಸಗಿ ಕೋಟಾದ ಸೀಟುಗಳಿಗೆ ಅನ್ವಯಿಸುವಂತೆ ಸ್ನಾತಕ ವೈದ್ಯಕೀಯ ಕೋರ್ಸ್‌ನ ಸೀಟುಗಳಿಗೆ 2024-25ನೇ ಸಾಲಿನಲ್ಲಿ ನಿಗಧಿ ಪಡಿಸಲಾದ ಶುಲ್ಕವನ್ನು 2025-26ನೇ ಸಾಲಿಗೂ ಸಹ ಮುಂದುವರೆಸಿ ಆದೇಶಿಸಲಾಗಿರುತ್ತದೆ.

2026-27ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸು (ಎಂಬಿಬಿಎಸ್/ಬಿಡಿಎಸ್/ಎಂಡಿ/ಎಂಎಸ್ & ಎಂಡಿಎಸ್)ಗಳ ಸೀಟು ಹಂಚಿಕೆ & ಶುಲ್ಕ ನಿಗಧಿಗೆ ಸಂಬಂಧಿಸಿದಂತೆ ಸರ್ಕಾರವು ರಾಜ್ಯದ ಖಾಸಗಿ ಕಾಲೇಜುಗಳ ಸಂಘಗಳಾದ ಕರ್ನಾಟಕ ವೃತ್ತಿಪರ ಕಾಲೇಜುಗಳ ಪ್ರತಿಷ್ಠಾನ (KPCF), ಕರ್ನಾಟಕ ಅಲ್ಪಸಂಖ್ಯಾತರ ವೃತ್ತಿಪರ ಕಾಲೇಜುಗಳ ಸಂಘ (AMPCK) ಹಾಗೂ ಕರ್ನಾಟಕ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತ ಕಾಲೇಜುಗಳ ಸಂಘ (KRLMPCA) ಸಂಸ್ಥೆಗಳೊಂದಿಗೆ ಪರಸ್ಪರ ಒಪ್ಪಂದದ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗಿದೆ. ಮೇಲೆ ಓದಲಾದ (02)ರ ನಡವಳಿಯಲ್ಲಿ 2026-27ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಖಾಸಗಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಸಂಘಗಳೊಂದಿಗೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:12.06.2026ರಂದು ನಡೆದ ಸಭೆಯಲ್ಲಿ, ಖಾಸಗಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಸಂಘಗಳು ಶುಲ್ಕ ಹೆಚ್ಚಳ ಹಾಗೂ ಇನ್ನಿತರೆ ಕೆಲವು ಬೇಡಿಕೆಗಳನ್ನು ಸಲ್ಲಿಸಿರುತ್ತಾರೆ.

ಸರ್ಕಾರಿ/ಅನುದಾನರಹಿತ ಖಾಸಗಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಎಲ್ಲಾ ಸ್ನಾತಕ ಕೋರ್ಸಿನ ಸೀಟುಗಳಿಗೂ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು/ಡೀಮ್ಡ್ ವಿಶ್ವವಿದ್ಯಾಲಯಗಳು ಸಂಬಂಧಿತ ಕಾಯ್ದೆಗಳು/ಮುಚ್ಚಳಿಕೆ ಮತ್ತು ಒಪ್ಪಂದ ಪತ್ರಗಳನ್ವಯ ಸರ್ಕಾರಕ್ಕೆ ಬಿಟ್ಟುಕೊಡುವ ಸೀಟುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ 2026-27ನೇ ಸಾಲಿಗೆ ಕೌನ್ಸಿಲಿಂಗ್ ನಡೆಸಿ ಸೀಟು ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ (KPCF/KRLMPCA/AMPCK) ವೈದ್ಯಕೀಯ (ಎಂಬಿಬಿಎಸ್) ಸೀಟುಗಳಿಗೆ

ಪಾವತಿಸಬೇಕಾದ ಶುಲ್ಕದಲ್ಲಿ ಯಾವುದೇ ಹೆಚ್ಚಳ ಮಾಡದೇ 2025-26ನೇ ಸಾಲಿಗೆ ನಿಗಧಿಪಡಿಸಲಾಗಿದ್ದ ಶುಲ್ಕವನ್ನು 2026-27ನೇ ಸಾಲಿಗೂ ಸಹ ಮುಂದುವರೆಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 218 ಆರ್‌ಜಿಯು 2026, ಬೆಂಗಳೂರು**
**ದಿನಾಂಕ:14-08-2026.**

ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ವೈದ್ಯಕೀಯ ಕೋರ್ಸಿನ ಸೀಟುಗಳಿಗೆ 2026-27ನೇ ಸಾಲಿನಲ್ಲಿ ಈ ಕೆಳಕಂಡಂತೆ ಶುಲ್ಕವನ್ನು ನಿಗಧಿಪಡಿಸಿ ಆದೇಶಿಸಲಾಗಿದೆ.

| ಕ್ರ.ಸಂ | ಸ್ನಾತಕ ಕೋರ್ಸುಗಳ ವಿವರ | ನಿಗಧಿಪಡಿಸಿದ ಶುಲ್ಕ (ರೂ.ಗಳಲ್ಲಿ) |
|---|---|---|
| 1 | ಎಂಬಿಬಿಎಸ್ | ರೂ.55,000/- |

ESI ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಶುಲ್ಕವನ್ನು ನಿಗಧಿಪಡಿಸಿ ಆದೇಶಿಸಲಾಗಿದೆ.

| ಕ್ರ ಸಂ | ಕಾಲೇಜುಗಳ ಹೆಸರು | ಕೋಟಾ | ಶುಲ್ಕ |
|---|---|---|---|
| 01 | ಇಎಸ್‌ಐಸಿ, ಬೆಂಗಳೂರು | All India and State quota seats | ರೂ. 1,00,000/- per annum |
| 02 | ಇಎಸ್‌ಐಸಿ, ಗುಲ್ಬರ್ಗಾ | All India and State quota seats | ರೂ. 1,00,000/- per annum |

ರಾಜ್ಯದಲ್ಲಿನ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಘಗಳು (KPCF/KRLMPCA/AMPCK) ಸರ್ಕಾರದೊಂದಿಗೆ ಮಾಡಿಕೊಂಡಿರುವ ಪರಸ್ಪರ ಒಡಂಬಡಿಕೆಯಂತೆ ಸರ್ಕಾರಿ/ಖಾಸಗಿ ಕೋಟಾದ ಸೀಟುಗಳಿಗೆ ಅನ್ವಯಿಸುವಂತೆ ಸ್ನಾತಕ ವೈದ್ಯಕೀಯ ಕೋರ್ಸ್‌ನ ಸೀಟುಗಳಿಗೆ 2025-26ನೇ ಸಾಲಿನಲ್ಲಿ ನಿಗಧಿ ಪಡಿಸಲಾದ ಶುಲ್ಕವನ್ನ ಮುಂದುವರೆಸಿ 2026-27ನೇ ಸಾಲಿನಲ್ಲಿ ಈ ಕೆಳಕಂಡಂತೆ ಶುಲ್ಕ ನಿಗಧಿಪಡಿಸಲಾಗಿರುತ್ತದೆ:-

ರೂ.ಗಳಲ್ಲಿ

| ಸಂಖ್ಯೆ | ಕೋರ್ಸುಗಳ ವಿವರ | KPCF/KRLMPCA/AMPCK ವ್ಯಾಪ್ತಿಯ ಕಾಲೇಜುಗಳಲ್ಲಿನ ಖಾಸಗಿ ಕೋಟದ ಅಭ್ಯರ್ಥಿಗಳಿಗೆ | | ಕೆಇಎ ಮೂಲಕ ಸರ್ಕಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ | |
|---|---|---|---|---|---|
| | | ಹಿಂದಿನ ಸಾಲಿನ ಶುಲ್ಕ (2025-26) | ಪ್ರಸ್ತುತ ಸಾಲಿನ ಶುಲ್ಕ (2026-27) | ಹಿಂದಿನ ಸಾಲಿನ ಶುಲ್ಕ (2025-26) | ಪ್ರಸ್ತುತ ಸಾಲಿನ ಶುಲ್ಕ (2026-27) |
| 1 | **ಎಂಬಿಬಿಎಸ್** | ರೂ.11,88,167/- | ರೂ.11,88,167/- | ರೂ.1,41,621/- | ರೂ.1,41,621/- |

KPCF/KRLMPCA/AMPCK ವ್ಯಾಪ್ತಿಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದಡಿ ಸ್ನಾತಕ ಕೋರ್ಸುಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೇಲಿನಂತೆ ನಿಗಧಿಪಡಿಸಿರುವ ಶುಲ್ಕವನ್ನೇ ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳಿಗೂ ಸಹ ನಿಗಧಿಪಡಿಸಿದೆ.

ಶ್ರೀ ಜಗದ್ಗುರು ಮಹಾಸ್ವಾಮಿಗಳು ಮೂರು ಸಾವಿರ ಮಠ ಮೆಡಿಕಲ್ ಕಾಲೇಜು (JGMMC), ಹುಬ್ಬಳ್ಳಿ ಈ ಸಂಸ್ಥೆಗೆ ಸರ್ಕಾರದಿಂದ ನೀಡಿರುವ EC/FC ಪ್ರಕಾರ ಸದರಿ ಕಾಲೇಜಿನ ಸರ್ಕಾರಿ ಕೋಟಾದ ಎಂಬಿಬಿಎಸ್ ಸೀಟುಗಳಿಗೆ ಸರ್ಕಾರ ನಿಗಧಿಪಡಿಸಿರುವ ಖಾಸಗಿ ಕೋಟಾ ಸೀಟಿನ ಶೇ.50ರಷ್ಟು ಶುಲ್ಕ, ಅಂದರೆ ರೂ.5,94,084/-ಗಳನ್ನು ನಿಗಧಿಪಡಿಸಲಾಗಿದೆ.

ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ಶ್ರೀನಿವಾಸ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಗಳೂರು ವಿಶ್ವವಿದ್ಯಾಲಯಕ್ಕೆ 2026-27ನೇ ಸಾಲಿನಿಂದ ಜಾರಿಗೆ ಬರುವಂತೆ ಹಾಗೂ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಹಾಗೂ ಇತರೆ ಖಾಸಗಿ ವಿಶ್ವವಿದ್ಯಾಲಯಗಳ ಕೋರಿಕೆಯಂತೆ,

ಸ್ನಾತಕ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

**ರೂ.ಗಳಲ್ಲಿ**

| **ಕ್ರ.ಸಂ** | **ಸಂಸ್ಥೆಯ ಹೆಸರು** | **ಸರ್ಕಾರಿ ಕೋಟಾ ಸೀಟುಗಳಿಗೆ** | **ಖಾಸಗಿ ಕೋಟಾ ಸೀಟುಗಳಿಗೆ** |
|---|---|---|---|
| 1 | ಸೇಂಟ್ ಜಾನ್ಸ್, ಬೆಂಗಳೂರು | - | ರೂ.8,10,535/- |
| 2 | ಎಐಎಂಎಸ್, ಬಾಲಗಂಗಾಧರನಾಥ ನಗರ, ನಾಗಮಂಗಲ, ಮಂಡ್ಯ. | ರೂ.1,41,621/- | ರೂ.22,00,000/- |
| 3 | ಎಸ್‌ಡಿಎಂ, ಧಾರವಾಡ | | ರೂ.20,00,000/- |
| 4 | ಕೆಬಿಎನ್, ಕಲಬುರಗಿ | | ರೂ.16,14,965/- |
| 5 | ಸಿಡಿಎಸ್‌ಎನ್‌ಇಆರ್, ಬೆಂಗಳೂರು. | | ರೂ.22,00,000/- |
| 6 | ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು | | ರೂ.25,00,000/- |
| 7 | ಸಪ್ತಗಿರಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ & ರಿಸರ್ಚ್ ಸೆಂಟರ್, ಬೆಂಗಳೂರು. | | ರೂ.22,00,000/- |
| 8 | ಬಿಜಿಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಬೆಂಗಳೂರು | | ರೂ.22,00,000/- |
| 9 | ಪಿಇಎಸ್ ಯೂನಿವರ್ಸಿಟಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ & ರಿಸರ್ಚ್ (PESUIMSR), ಬೆಂಗಳೂರು. | | ರೂ.22,00,000/- |
| 10 | ಶ್ರೀ ಮಧುಸೂಧನ್ ಸಾಯಿ ವೈದ್ಯಕೀಯ ಸಂಸ್ಥೆ, ಚಿಕ್ಕಬಳ್ಳಾಪುರ | | ರೂ.22,00,000/- |
| 11 | ಶ್ರೀನಿವಾಸ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಗಳೂರು | | ರೂ.22,00,000/- |

**ಸೂಚನೆ: 1.** NRI ಮತ್ತು ಇತರೆ ಮ್ಯಾನೇಜ್‌ಮೆಂಟ್ ಕೋಟಾದ ಸೀಟುಗಳ ಶುಲ್ಕಕ್ಕೆ ಸಂಬಂಧಿಸಿದಂತೆ ಆಯಾ ಸಂಸ್ಥೆಗಳ ಮನವಿಯನ್ನು ಪರಿಗಣಿಸುವುದು ಹಾಗೂ ಸದರಿ ಶುಲ್ಕವು ರೂ.45,00,000/-ಗಳನ್ನು ಮೀರತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

14/8

**(ಬಿ.ಎಸ್. ಪ್ರವೀಣ್)**
ಸರ್ಕಾರದ ಅಧೀನ ಕಾರ್ಯದರ್ಶಿ-3,
ವೈದ್ಯಕೀಯ ಶಿಕ್ಷಣ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.
2. ಪ್ರಧಾನ ಮಹಾಲೇಖಪಾಲರು (ಜಿ&ಇ&ಆರ್‌ಎಸ್‌ಎ), ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.

3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
4. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-560041.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012.
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿ.ಎಂ.ಸಿ & ಆರ್.ಐ. ಹಳೆಯ ಕಟ್ಟಡ, ಕೆ.ಆರ್.ರಸ್ತೆ, ಬೆಂಗಳೂರು-02.
7. ಅಧ್ಯಕ್ಷರು/ಕಾರ್ಯದರ್ಶಿ, ಕೆ.ಪಿ.ಸಿ.ಎಫ್(ಕಾಮೆಡ್-ಕೆ), ನಂ.132, 2ನೇ ಮಹಡಿ, 17ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055.
8. ಅಧ್ಯಕ್ಷರು/ಕಾರ್ಯದರ್ಶಿ, ಕರ್ನಾಟಕ ರಾಜ್ಯ ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಒಕ್ಕೂಟ, (ಕೆ.ಆರ್.ಎಲ್.ಪಿ.ಸಿ.ಎ) ನಂ.143, ಸೂರ್ಯಮುಖಿ ಅಪಾರ್ಟ್‌ಮೆಂಟ್, 4ನೇ ಮಹಡಿ, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು.
9. ಅಧ್ಯಕ್ಷರು/ಕಾರ್ಯದರ್ಶಿಗಳು, ಕರ್ನಾಟಕ ಅಲ್ಪಸಂಖ್ಯಾತ ವೃತ್ತಿಪರ ಕಾಲೇಜುಗಳ ಸಂಘ(ಎ.ಎಂ.ಪಿ.ಸಿ.ಕೆ), ಯೂನಿಟ್ ನಂ.205, ಲಕ್ಷ್ಮಿ ಅಪಾರ್ಟ್‌ಮೆಂಟ್ಸ್, ನಂ.06, ಕಾರ್ನ್‌ವೆಲ್ ರಸ್ತೆ, ಲ್ಯಾಂಗ್‌ಫೋರ್ಡ್ ಗಾರ್ಡನ್, ರಿಚ್ಮಂಡ್ ಟೌನ್, ಬೆಂಗಳೂರು-560001.
10. ಸಂಬಂಧಿಸಿದ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ, ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ವಿಶ್ವವಿದ್ಯಾಲಯಗಳಿಗೆ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ (ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖಾಂತರ)

<u>ಪ್ರತಿಯನ್ನು ಮಾಹಿತಿಗಾಗಿ:-</u>

1. ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಜಗದ್ಗುರು ಮುರುಗರಾಜೇಂದ್ರ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಚಿತ್ರದುರ್ಗ ಮತ್ತು ಎಸ್‌ಜೆಎಂ ದಂತ ಮಹಾವಿದ್ಯಾಲಯ, ಚಿತ್ರದುರ್ಗ ಈ ಸಂಸ್ಥೆಗಳಿಗೆ 2026-27ನೇ ಶೈಕ್ಷಣಿಕ ವರ್ಷದ ಖಾಸಗಿ ಕೋಟಾದಲ್ಲಿ ಶುಲ್ಕ ನಿಗಧಿಪಡಿಸಲು ಕೋರಿರುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 145 ಆರ್‌ಜಿಯು 2025, ದಿನಾಂಕ:21.07.2025.
2. ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 141 ಆರ್‌ಜಿಯು 2025, ದಿನಾಂಕ:16.07.2025.
3. 2026-27ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಖಾಸಗಿ ಕಾಲೇಜುಗಳ ಸಂಘಗಳೊಂದಿಗೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:12.06.2026ರಂದು ನಡೆದ ಸಭಾ ನಡವಳಿಗಳು
4. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಏಕಕಡತ ಸಂಖ್ಯೆ:DME/SMS/MCS/231/2026.

*******

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ 2025-26ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ, ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸು (MBBS)ಗಳ ಸೀಟುಗಳ ಪ್ರವೇಶ ಶುಲ್ಕವನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಆದೇಶದಲ್ಲಿ 2025-26ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ, ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸ್ನಾತಕ ಕೋರ್ಸು (BDS)ಗಳ ಸೀಟುಗಳ ಪ್ರವೇಶ ಶುಲ್ಕವನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (03)ರಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಖಾಸಗಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕಾಗಿ ಸೀಟು ಹಂಚಿಕೆ ಹಾಗೂ ಶುಲ್ಕ ನಿಗಧಿಗೆ ಸಂಬಂಧಿಸಿದಂತೆ ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳೊಂದಿಗೆ ಒಡಂಬಡಿಕೆಯ ಒಪ್ಪಂದ (Consensual Agreement) ಮಾಡಿಕೊಂಡಿದ್ದು, ಅದರನ್ವಯ ದಿನಾಂಕ:12.06.2026ರಂದು ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

"2026-27ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸುಗಳ ಸರ್ಕಾರಿ ಕೋಟಾ ಹಾಗೂ ಖಾಸಗಿ

3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ರಸ್ತೆ, ಅಂಚೆಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
4. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-560041.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012.
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿ.ಎಂ.ಸಿ & ಆರ್.ಐ. ಹಳೆಯ ಕಟ್ಟಡ, ಕೆ.ಆರ್.ರಸ್ತೆ, ಬೆಂಗಳೂರು-02.
7. ಶ್ರೀ ಜಗದ್ಗುರು ಮುರುಗರಾಜೇಂದ್ರ ವಿಶ್ವವಿದ್ಯಾಲಯ, NH-4, SJM Campus, ಚಿತ್ರದುರ್ಗ-577502.
8. ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, NH-4, SJM Campus, ಚಿತ್ರದುರ್ಗ-577502.
9. ಎಸ್‌ಜೆಎಂ ದಂತ ಮಹಾವಿದ್ಯಾಲಯ, ಬಿ.ಡಿ. ರಸ್ತೆ, ಚಿತ್ರದುರ್ಗ-577501.
10. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:-</u>

1. ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಕೋಟಾ ಸೀಟುಗಳಿಗೆ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಜಾರಿಯಲ್ಲಿದ್ದ ಶುಲ್ಕವನ್ನು ಮುಂದುವರೆಸುವುದು".

ಮೇಲೆ ಓದಲಾದ(4)ರ ಏಕಕಡತದಲ್ಲಿ, ಶ್ರೀ ಜಗದ್ಗುರು ಮುರುಗರಾಜೇಂದ್ರ ವಿಶ್ವವಿದ್ಯಾಲಯಕ್ಕೆ 2026-27ನೇ ಶೈಕ್ಷಣಿಕ ವರ್ಷದ ಖಾಸಗಿ ಕೋಟಾ ಶುಲ್ಕವನ್ನು ಇತರ ವಿಶ್ವವಿದ್ಯಾನಿಲಯಗಳಿಗೆ 2025-26ನೇ ಸಾಲಿನಲ್ಲಿ ನಿಗಧಿಪಡಿಸಿರುವ ಶುಲ್ಕದಂತೆ, ಸದರಿ ವಿಶ್ವವಿದ್ಯಾನಿಲಯಕ್ಕೂ ನಿಗಧಿಪಡಿಸುವಂತೆ ಕುಲಸಚಿವರು, ಶ್ರೀ ಜಗದ್ಗುರು ಮುರುಗರಾಜೇಂದ್ರ ವಿಶ್ವವಿದ್ಯಾಲಯ ಕೋರಿದ್ದು, ಸಂಸ್ಥೆಯು ಸಲ್ಲಿಸಿರುವ ಸದರಿ ಮನವಿಯ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಶ್ರೀ ಜಗದ್ಗುರು ಮುರುಗರಾಜೇಂದ್ರ ವಿಶ್ವವಿದ್ಯಾಲಯದ ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಚಿತ್ರದುರ್ಗ ಮತ್ತು ಎಸ್‌ಜೆಎಂ ದಂತ ಮಹಾವಿದ್ಯಾಲಯ, ಚಿತ್ರದುರ್ಗ ಈ ಸಂಸ್ಥೆಗಳಿಗೆ 2026-27ನೇ ಶೈಕ್ಷಣಿಕ ವರ್ಷದ ಖಾಸಗಿ ಕೋಟಾ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 213 ಆರ್‌ಜಿಯು 2026, ಬೆಂಗಳೂರು ದಿನಾಂಕ:13-08-2026.**

ಮೇಲ್ಕಂಡ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಶ್ರೀ ಜಗದ್ಗುರು ಮುರುಗರಾಜೇಂದ್ರ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಚಿತ್ರದುರ್ಗ ಮತ್ತು ಎಸ್‌ಜೆಎಂ ದಂತ ಮಹಾವಿದ್ಯಾಲಯ, ಚಿತ್ರದುರ್ಗ ಈ ಸಂಸ್ಥೆಗಳಿಗೆ 2026-27ನೇ ಶೈಕ್ಷಣಿಕ ವರ್ಷದ ಖಾಸಗಿ ಕೋಟಾದ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಲಾಗಿದೆ.

**(ರೂ.ಗಳಲ್ಲಿ)**

| ಕ್ರ.ಸಂ | **ಸ್ನಾತಕ ಕೋರ್ಸುಗಳ ವಿವರ** | **ಖಾಸಗಿ ಕೋಟಾದ ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕ** | **ಮ್ಯಾನೇಜ್‌ಮೆಂಟ್/NRI ಸೀಟುಗಳಿಗೆ ನಿಗಧಿಪಡಿಸಿದ ಶುಲ್ಕ** |
|---|---|---|---|
| 1 | ಎಂಬಿಬಿಎಸ್ | ರೂ.22,50,000/- | ರೂ.34,50,000/- |
| 2 | ಬಿಡಿಎಸ್ | ರೂ.4,00,000/- | ರೂ.4,00,000/- |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಬಿ.ಎನ್. ಪ್ರವೀಣ್)**
ಸರ್ಕಾರದ ಅಧೀನ ಕಾರ್ಯದರ್ಶಿ-3,
ವೈದ್ಯಕೀಯ ಶಿಕ್ಷಣ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ), ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.
2. ಪ್ರಧಾನ ಮಹಾಲೇಖಪಾಲರು (ಜಿ&ಇ&ಆರ್‌ಎಸ್‌ಎ), ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು -560001.

# Karnataka Examinations Authority

## MEDICAL COLLEGE-WISE FEE STRUCTURE 2026-27(MBBS)

**NOTE:**
**The FEE Published is as per the 2026 Government order No MED 218 RGU 2026 Date on 14-08-2026 AND MED 213 RGU 2026 Date on 13-08-2026**

| SL | college code | COLLEGE NAME | COLLEGE TYPE | Govt Fees | Private Fees | Management Fees | NRI Fees |
|---|---|---|---|---|---|---|---|
| 1 | M001 | Bangalore Medical College,NO-2, Fort , K R ROAD,Bangalore | Government | 64350 | 0 | 0 | 0 |
| 2 | M021 | Mysore Medical College,Irwin Road,,Mysore | Government | 64350 | 0 | 2509350 | 2509350 |
| 3 | M024 | Mandya Institute of Medical Sciences,District Hospital,,Mandya | Government | 64350 | 0 | 2509350 | 2509350 |
| 4 | M025 | Hassan Institute of Medical Sciences,Near Chamarajendra Hospital,Hassan | Government | 64350 | 0 | 2509350 | 2509350 |
| 5 | M031 | Karnataka Institute of Medical Sciences,Vidyanagar,Hubli | Government | 64350 | 0 | 2509350 | 2509350 |
| 6 | M037 | Belgaum Institute of Medical Sciences,Dr B R Ambedkar Road,,Belgaum | Government | 64350 | 0 | 2509350 | 2509350 |
| 7 | M041 | Vijayanagar Institute of Medical Sciences,Cantonment,Bellary | Government | 64350 | 0 | 2509350 | 2509350 |
| 8 | M044 | Bidar Institute of Medical Sciences,Udgir Road,,Bidar | Government | 64350 | 0 | 2509350 | 2509350 |
| 9 | M045 | Raichur Institute of Medical Sciences,Sy No.307 & 308,,Raichur | Government | 64350 | 0 | 2509350 | 2509350 |
| 10 | M063 | Shimoga Institute of Medical Sciences,Sagar Road,,Shimoga | Government | 64350 | 0 | 0 | 0 |
| 11 | M066 | ESI Medical College,Rajajinagar,Bangalore | Government | 109350 | 0 | 0 | 0 |
| 12 | M070 | ESI Medical College,Sedam Road,Gulbarga | Government | 109350 | 0 | 0 | 0 |
| 13 | M072 | Gulbarga Institute of Medical Sciences,VIRESHNAGAR SEDAM ROAD,,GULBARGA | Government | 64350 | 0 | 2509350 | 2509350 |
| 14 | M073 | Koppal Institute of Medical Sciences,GANGAVATI ROAD, KIDDIDAL GATE,,KOPPAL | Government | 64350 | 0 | 2509350 | 2509350 |
| 15 | M074 | K.H. Patil Institute of Medical Sciences (previously Gadag Institute of Medical Sciences, Mallasamudra, Mulgund Road, Gadag) | Government | 64350 | 0 | 2509350 | 2509350 |
| 16 | M075 | Chamarajanagar Institute of Medical Science,SURVEY NO 124, YADAPURA,CHAMARAJANAGAR | Government | 64350 | 0 | 0 | 0 |
| 17 | M076 | Karwar Institute of Medical Science,M G ROAD,UTTARA KANNADA | Government | 64350 | 0 | 2509350 | 2509350 |

| | | | | | | | |
|---|---|---|---|---|---|---|---|
| 18 | M077 | Kodagu Institute of Medical Sciences,,MADIKERI | Government | 64350 | 0 | 0 | 0 |
| 19 | M082 | Shri Atal Bihari Vajpayee Institute of Medical Science,,Bengaluru | Government | 64350 | 0 | 2509350 | 2509350 |
| 20 | M084 | Nandi Medical College and Research Institute Chikkaballapura (Chikkaballapura Institute of Medical Sciences Chikkaballapura ) | Government | 64350 | 0 | 2509350 | 2509350 |
| 21 | M085 | Chikkamagaluru Institute of Medical Sciences,,Chikkamagaluru | Government | 64350 | 0 | 0 | 0 |
| 22 | M086 | Haveri Institute of Medical Sciences,,Haveri | Government | 64350 | 0 | 0 | 0 |
| 23 | M087 | Yadgiri Institute of Medical Sciences,,Yadgiri | Government | 64350 | 0 | 0 | 0 |
| 24 | M092 | Chitradurga Medical College and Research Institute,,Chitradurga | Government | 64350 | 0 | 0 | 0 |
| 25 | M008 | M.V.J.Medical College and Research Hospital,NH-4, Dandupalya, Kolathur -,Channasandra, Bangalore | Minority (L,R) | 153571 | 1200117 | 4011950 | 4011950 |
| 26 | M009 | Vydehi Institute of Medical Science and Research Centre,No. 82,EPIP Area, Nallurahalli,Bangalore | Minority (L,R) | 153571 | 1200117 | 4411950 | 4411950 |
| 27 | M010 | A.J.Institute of Medical Sciences,NH - 66, Kuntikana,Mangalore | Minority (L,R) | 153571 | 1200117 | 4011950 | 4011950 |
| 28 | M011 | St John Medical College,,Bangalore | Minority (L,R) | 0 | 810535 | 0 | 0 |
| 29 | M033 | Al-Ameen Medical College,ADMINISTRATIVE BLOCK,VIJAYAPUR | Minority (L,R) | 153571 | 1200117 | 2911950 | 2911950 |
| 30 | M043 | Navodaya Medical College,PB No.26, Navodaya Nagar,Raichur | Minority (L,R) | 153571 | 1200117 | 2736950 | 2736950 |
| 31 | M050 | Father Muller Institute of Med. Education & Research,Father Muller Road,,Mangalore | Minority (L,R) | 153571 | 1200117 | 3611950 | 3611950 |
| 32 | M067 | Subbaiah Institute of Medical Science,NH-13, Purle,,Shimoga | Minority (L,R) | 153571 | 1200117 | 2711950 | 2711950 |
| 33 | M071 | The Oxford Medical College Hospital and Research Center,Yadavanahalli, Attibele Hobli,Bangalore | Minority (L,R) | 153571 | 1200117 | 3411950 | 3611950 |
| 34 | M078 | Akash Institute of Medical Sciences and Research Centre,DEVANAHALLI,,BANGALORE | Minority (L,R) | 153571 | 1200117 | 3611950 | 3611950 |
| 35 | M079 | Kanachur Institute of Medical Sciences and Research Centre,UNIVERSITY ROAD,MANGALORE | Minority (L,R) | 153571 | 1200117 | 2861950 | 2861950 |
| 36 | M088 | G R Medical College Hospital and Research Centre Mangalore D.K | Minority (L,R) | 153571 | 1200117 | 2711950 | 2711950 |
| 37 | M091 | SRI CHAMUNDESHWARI MEDICAL COLLEGE, HOSPITAL AND RESEARCH INST,,CHANNAPATNA, RAMANAGARA | Minority (L,R) | 153571 | 1200117 | 3101950 | 3101950 |
| 38 | M098 | ALVAS INSTITUTE OF MEDICAL SCIENCES AND RESEARCH CENTRE, DK
 | Minority (L,R) | 153571 | 1200117 | 2511950 | 2511950 |
| 39 | M002 | Dr. B.R. Ambedkar Medical College,Kadugondanahalli,,Bangalore | Private UnAided | 153571 | 1200117 | 3511950 | 3511950 |

| | | | | | | | |
|---|---|---|---|---|---|---|---|
| 40 | M003 | Kempegowda Institute of Medical Sciences,B.S.K II Stage,,Bangalore | Private UnAided | 153571 | 1200117 | 4311950 | 4311950 |
| 41 | M035 | S. Nijalingappa Medical College and Research Centre,,Bagalkot | Private UnAided | 153571 | 1200117 | 3361950 | 3361950 |
| 42 | M042 | Mahadevappa Rampure Medical College,Mahadevappa Rampure Marg,Kalaburgi | Private UnAided | 153571 | 1200117 | 3911950 | 3911950 |
| 43 | M054 | K.Venkataramana Gowda Medical College and Hospital,Kurunjibag,,Dakshina Kannada | Private UnAided | 153571 | 1200117 | 2634214 | 2634214 |
| 44 | M061 | Jaya Jagadguru Murugharajendra Medical College,,Davangere District | Private UnAided | 153571 | 1200117 | 3911950 | 3911950 |
| 45 | M062 | Shymanuru Shivashankarappa Institute Of Medical Sciences,Jnanashankara, NH-4,Davangere | Private UnAided | 153571 | 1200117 | 3611950 | 3611950 |
| 46 | M068 | BGS Global Institute of Medical Sciences,# 67, BGS Health & Education,Kengeri, Bangalore | Private UnAided | 153571 | 1200117 | 4211950 | 4211950 |
| 47 | M069 | Shridevi Institute of Medical Sciences and Research Hospital,Sira Road,,Tumkur | Private UnAided | 153571 | 1200117 | 3341950 | 3341950 |
| 48 | M081 | East Point College of Medical Sciences and Research Center,,Bangalore | Private UnAided | 153571 | 1200117 | 3711950 | 3711950 |
| 49 | M090 | Siddaganga Medical College and Research Institute,,Tumakuru | Private UnAided | 153571 | 1200117 | 3011950 | 3011950 |
| 50 | M096 | S R Patil Medical College Hospital and Research Center,Badagandi,BAGALKOT | Private UnAided | 153571 | 1200117 | 3511950 | 3511950 |
| 51 | M097 | Farookh Academy of Medical Education Hospital and Research Institute, Mysore Madikeri Road, Near Illavala Hunsur Taluk, Mysore District | Private UnAided | 153571 | 1200117 | 3311950 | 3311950 |
| 52 | M004 | M.S.Ramaiah Medical College,MSR Nagar, MSRIT Post,Bangalore | Private/ Deemed University | 156621 | 2515000 | 4500000 | 4500000 |
| 53 | M005 | Khaja Bande Navaz Institute Of Medical Sciences,Rouza Buzurq,,Gulbarga | Private/ Deemed University | 156621 | 1629965 | 3215000 | 3215000 |
| 54 | M020 | Sri Basaveshwara Medical College and Hospital,NH-4, S.J.M.I.T Campus,,Chitradurga | Private/ Deemed University | 156621 | 2265000 | 3470000 | 3470000 |
| 55 | M022 | Jagadguru Sri Shivarathreeswara Medical College,Sri Shivarathreeshwara Nagar,,Mysore | Private/ Deemed University | 153571 | 0 | 0 | 0 |
| 56 | M023 | Adichunchanagiri Institute of Medical Sciences,B.G Nagar,,Bellur, Mandya Dist. | Private/ Deemed University | 156621 | 2215000 | 3515000 | 3515000 |
| 57 | M032 | Jawaharalal Nehru Medical College,Nehru Nagar,Belgaum | Private/ Deemed University | 156621 | 0 | 0 | 0 |
| 58 | M036 | SDM College of Medical Sciences and Hospital,Manjushree Nagar, PB ROAD,Dharwad | Private/ Deemed University | 156621 | 2015000 | 3615000 | 3615000 |
| 59 | M051 | Kasturba Medical College,PB No -53,,Hampanakatta,Mangalore. | Private/ Deemed University | 153571 | 0 | 0 | 0 |
| 60 | M052 | Yenepoya Medical College,University Road, Nithyanandar,Mangalore | Private/ Deemed University | 156621 | 0 | 0 | 0 |
| 61 | M053 | K.S.Hegde Medical Academy,Nithyananda Nagar,Mangalore | Private/ Deemed University | 156621 | 0 | 0 | 0 |
| 62 | M064 | Sapthagiri Institute of Medical Sciences,No.15, chikkasandra,,Bangalore | Private/ Deemed University | 182371 | 2240750 | 4500000 | 4500000 |

| | | | | | | | |
|---|---|---|---|---|---|---|---|
| 63 | M065 | Srinivasa Institute of Medical Research Center Srinivas Nagar Mangalore | Private/ Deemed University | 166621 | 2225000 | 2975000 | 2975000 |
| 64 | M083 | Dr. Chandramma Dayananda Sagar Institute of Medical Education,,Harohalli hobli, Kanakapura Rd | Private/ Deemed University | 156621 | 2215000 | 4015000 | 4015000 |
| 65 | M089 | Jagadguru Gangadhar Mahaswamigalu Moorusavirmath Medical College,Dharwad | Private/ Deemed University | 609084 | 0 | 0 | 0 |
| 66 | M093 | Sri Madhusudan Sai Institute of Medical Sciences and Research,,Muddenahalli,CHIKKABALLAPURA | Private/ Deemed University | 0 | 2200000 | 4500000 | 4500000 |
| 67 | M094 | PES University Institute of Medical Sceinces and Research,Electronic city,BANGALORE | Private/ Deemed University | 156621 | 2215000 | 3915000 | 3915000 |
| 68 | M095 | BGS Medical College and Hospital,,BANGALORE | Private/ Deemed University | 156621 | 2215000 | 3515000 | 3515000 |

**NOTE: ALL FEES IN INDIAN RUPEES PER ONE YEAR.**